# ಕುವೆಂಪು ವಿಶ್ವವಿದ್ಯಾಲಯ

**ಕುಲಸಚಿವರು**

ವಿಶ್ವವಿದ್ಯಾಲಯ ಕಾರ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ - 577451
ಶಿವಮೊಗ್ಗ ಜಿಲ್ಲೆ, ಕರ್ನಾಟಕ

ಸಂಖ್ಯೆ: ಕುವಿ/ಪ.ಜಾ:ಪ.ಪಂ.ಘ-2/ / 2023-24/ ದಿನಾಂಕ: 18-12-2023

## ಮರು ಪ್ರಕಟಣೆ

**ವಿಷಯ: ಕ್ಷೇತ್ರಕಾರ್ಯ (Project Work) ಕೈಗೊಂಡ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಪಡೆಯಲು ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಿರುವ ಕುರಿತು.**

**ಉಲ್ಲೇಖ: 1. ಪ್ರಕಟಣೆ ಸಂಖ್ಯೆ: ಕುವಿ/ಪ.ಜಾ:ಪ.ಪಂ.ಘ-2/167/2023-24/**

**ದಿನಾಂಕ: 09-10-2023**

**2. ಸ್ನಾತಕೋತ್ತರ ವಿದ್ಯಾರ್ಥಿಗಳ ಮನವಿ ದಿನಾಂಕ: 07-11-2023**

**3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13-12-2023**

-*-*-*-

2022-23 ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ಆವರಣ, ಸ್ನಾತಕೋತ್ತರ ಕೇಂದ್ರ ಹಾಗೂ ಘಟಕ ಕಾಲೇಜಿನ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ಷೇತ್ರಕಾರ್ಯ (Project Work) ಕೈಗೊಳ್ಳಲು ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದ್ದು, ಉಲ್ಲೇಖ (1) ರಲ್ಲಿ ಪ್ರಕಟಣೆಯನ್ನು ಹೊರಡಿಸಿ, ಆನ್ ಲೈನ್ ಮೂಲಕ Google Format ನಲ್ಲಿ ನಿಗದಿತ ಅರ್ಜಿಯನ್ನು ಆಹ್ವಾನಿಸಲಾಗಿತ್ತು.

ಆದರೆ, ಕೆಲವು ವಿಭಾಗದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇರುವ ಕಾರಣ, ಸದರಿ ಸಹಾಯಧನವನ್ನು ಪಡೆಯಲು ಅನುಕೂಲವಾವಗುವಂತೆ ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸಲು ಕಾಲಾವಕಾಶ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದನ್ನು ಮಾನ್ಯ ಕುಲಪತಿಗಳು ಉಲ್ಲೇಖ (2) ರಲ್ಲಿ ಒಪ್ಪಿ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ, **ಈ ಹಿಂದೇ ಉಲ್ಲೇಖ (1) ರ ಪ್ರಕಟಣೆಗೆ ಎದುರಾಗಿ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಮಾತ್ರ, ಅರ್ಜಿ ಸಲ್ಲಿಸುವ ದಿನಾಂಕವನ್ನು 28-12-2023 ರವರೆಗೆ ವಿಸ್ತರಿಸಲಾಗಿದೆ.** ಹಾಗೂ ಅರ್ಜಿಯನ್ನು ಆನ್ ಲೈನ್ ಮೂಲಕ Google Format ನಲ್ಲಿ ಸಲ್ಲಿಸಲು ಅವಕಾಶ ನೀಡಲಾಗಿದೆ. ವಿಶ್ವವಿದ್ಯಾನಿಲಯದ ಅಂತರ್ಜಾಲ ವಿಳಾಸ :-

http://www.kuvempu.ac.in

↓

***SC/ST downloads*** ರಲ್ಲಿ

↓

***Google Format*** ನ ಮೂಲಕ

(**Google form Link** : https://forms.gle/TpGmLk2PR8XmK68v7)

ಅರ್ಜಿಗಳನ್ನು ಆನ್ ಲೈನ್ ಮೂಲಕವೇ ಭರ್ತಿ ಮಾಡಿ ನಿಗದಿತ **ದಿನಾಂಕದೊಳಗೆ *Submit*** ಮಾಡಲು ತಿಳಿಸಲಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ/ ಪರಿಗಣಿಸಲಾಗುವುದಿಲ್ಲ.

ತಾವು ಭರ್ತಿ ಮಾಡಲಾದ ವಿವರವನ್ನು ಅರ್ಜಿ ರೂಪದಲ್ಲಿ ತಮ್ಮ ಇ-ಮೇಲ್ ವಿಳಾಸಕ್ಕೆ ಮರು ಸಲ್ಲಿಸಲಾಗುವುದು. ಸದರಿ ಅರ್ಜಿಯನ್ನು ಪರಿಶೀಲಿಸಿ, ಮುದ್ರಿಸಿಕೊಂಡ ನಂತರ ಅರ್ಜಿ ನಮೂನೆಯನ್ನು ಅಗತ್ಯ ದಾಖಲಾತಿಗಳೊಂದಿಗೆ ಆಯಾ ವಿಭಾಗಕ್ಕೆ ಸಲ್ಲಿಸುವುದು. ಆಯಾ ವಿಭಾಗದ ಮುಖ್ಯಸ್ಥರು ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ, ಕ್ಷೇತ್ರಕಾರ್ಯ ಕೈಗೊಂಡಿರುವ ಬಗ್ಗೆ ದೃಢೀಕರಣದೊಂದಿಗೆ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕದ ಕಛೇರಿಗೆ **ದಿನಾಂಕ: 30-12-2023** ರೊಳಗಾಗಿ ಕಳುಹಿಸುವುದು.

Digitally Signed by Snehal Sudhakar Lokhande
Date: 18-12-2023 18:05:45
Reason: Approved

**ಕುಲಸಚಿವರು**

ಗೆ,

i. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
ii. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ, ಕಲಾ ಹಾಗೂ ವಾಣಿಜ್ಯ ಕಾಲೇಜು, ಶಿವಮೊಗ್ಗ
iii. ವಿಭಾಗದ ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರ, ಕಡೂರು ಹಾಗೂ ಚಿಕ್ಕಮಗಳೂರು.

**ವಿಶೇಷ ಸೂಚನೆ: ಈ ಹಿಂದೇ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳಿಗೆ ಸದರಿ ಮಾಹಿತಿಯನ್ನು ರವಾನಿಸಿ, ಅರ್ಜಿ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.**

**ಪ್ರತಿಗಳು:**

1. ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳ ಆಪ್ತಕಾರ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದಿ, ಶಂಕರಘಟ್ಟ.
2. ಕಛೇರಿ ಪ್ರತಿ/ಹುಂಡಿ ಪ್ರತಿ.